


# ಇದು ಬರಿ ಬೆಳಗಲ್ಲೋ ಅಣ್ಣಾ....

ವರಕವಿ ಬೇಂದ್ರೆಯವರು 'ಬೆಳಗು' ಎಂಬ ಕವಿತೆಯ ಕೊನೆಯಲ್ಲಿ ಉದ್ಗರಿಸುತ್ತಾರೆ: **'ಇದು ಬರಿ ಬೆಳಗಲ್ಲೋ ಅಣ್ಣಾ...!'** ಆರಂಭದಲ್ಲಿ ಸೂರ್ಯೋದಯದ ವರ್ಣನೆ, ನಸುಕಿನ ಸೊಬಗು, ಎಚ್ಚೆತ್ತ ಪ್ರಪಂಚದ ವ್ಯಾಪಾರಗಳು, ಹಕ್ಕಿಗಳ ಕಲರವ, ಹೊಸತನದ ನವೀನತೆ – ಇವನ್ನೆಲ್ಲ ವರ್ಣಿಸಿದ ಬಳಿಕ, ಕೊನೆಗೆ ಬರುವ ಮಾತು, ಇದು ಕೇವಲ ಸೂರ್ಯೋದಯವಲ್ಲ, ಇಡೀ ಸೃಷ್ಟಿಯಲ್ಲಿ ಹೊಸ ಎಚ್ಚರದ, ಜೀವಂತಿಕೆಯ, ದಿವ್ಯತೆಯ ಉದಯ. ಇದೇ ಭಾವವನ್ನು ರಾಮಕೃಷ್ಣ ಭಾವಧಾರೆಯ ಬಗೆಗೂ ಅನ್ವಯಿಸಬಹುದು. ಭಾರತದಲ್ಲಿ, ಕರ್ನಾಟಕದಲ್ಲಿ, ಇಡೀ ವಿಶ್ವದಲ್ಲಿ ರಾಮಕೃಷ್ಣ ಭಾವಧಾರೆ ನಿಧಾನವಾಗಿ ಹರಡುತ್ತ ಬಂತು; ನವಯುಗದ ಆಧ್ಯಾತ್ಮಿಕ ಅರುಣೋದಯಕ್ಕೆ ನಾಂದಿ ಹಾಡಿತು. ಆದರೆ ಅಷ್ಟೇ ಅಲ್ಲ; ಈ ಉದಯ ಸಮಸ್ತ ಮನುಕುಲದ ಇತಿಹಾಸದಲ್ಲಿ ಹೊಸ ಒಂದು ಯುಗವನ್ನೇ ಆರಂಭಿಸಿತು ಎನ್ನಬಹುದು. ಸ್ವಾಮಿ ವಿವೇಕಾನಂದರು ಹೇಳುವಂತೆ, ಶ್ರೀರಾಮಕೃಷ್ಣರ ಆಗಮನದೊಂದಿಗೆ ಸತ್ಯಯುಗ ಆರಂಭವಾಯಿತು. ಆದರೆ, ಅದು ಈಗಿನ್ನೂ ಆರಂಭವಾಗಿದೆಯಷ್ಟೆ; ಅಲ್ಲಲ್ಲಿ ಅದರ ಮೊಳಕೆಯೊಡೆದಿದೆ, ಬೆಳವಣಿಗೆ ಕೆಲವೆಡೆ ಕಾಣಿಸಿಕೊಳ್ಳುತ್ತಿದೆ. ಸಮಸ್ತ ಮನುಕುಲವನ್ನು ವ್ಯಾಪಿಸುವ, ವಿಶ್ವದಲ್ಲಿ ಸಾರ್ವತ್ರಿಕ ಜೀವನವನ್ನು ಹಬ್ಬುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ. ಸ್ವಾಮಿ ವಿವೇಕಾನಂದರು ಬಯಸಿದ 'ವಿಶ್ವಧರ್ಮ'ದ ಆದರ್ಶವಾಗಲಿ, ಶ್ರೀರಾಮಕೃಷ್ಣರೇ ಅನುಸರಿಸಿದ ವಿವಿಧ ಧರ್ಮಗಳ ಸಮನ್ವಯವಾಗಲಿ, ಇಂದು ವಿಶ್ವದೆಲ್ಲೆಡೆ ಕಾಣಿಸದಿರಬಹುದು; ಆದರೆ ಜಗತ್ತು ಒಂದಲ್ಲ ಒಂದು ದಿನ ಸಾರ್ವತ್ರಿಕವಾಗಿ ಸ್ವೀಕಾರಾರ್ಹವಾದ ಆಧ್ಯಾತ್ಮಿಕ ಮಾರ್ಗದ ಬಗೆಗೆ ಚಿಂತಿಸಲೇಬೇಕು. ಅದಕ್ಕೆ ಅತ್ಯಂತ ಸಮರ್ಪಕವಾಗಿ, ಎಲ್ಲ ಅಂಗಾಂಗಗಳೊಡನೆ ಹೊಂದಿಕೊಳ್ಳಬಲ್ಲ ತತ್ತ್ವ-ಧರ್ಮ-ಆಧ್ಯಾತ್ಮಿಕ ಭಾವಗಳು ರಾಮಕೃಷ್ಣ-ವಿವೇಕಾನಂದ ಭಾವಧಾರೆಯಲ್ಲಿವೆ. ಇತಿಹಾಸವು ಗುರುತಿಸಲಾಗದಷ್ಟು ಅನಾದಿ ಕಾಲದಲ್ಲೇ ಹುಟ್ಟಿದ ಸನಾತನ ತತ್ತ್ವಗಳು ಕಾಲಾನುಕ್ರಮದಲ್ಲಿ ಹಲವಾರು ಏರುಪೇರುಗಳಿಂದ ಹರಿದು ಬಂದರೂ, ಆಧುನಿಕ ಕಾಲದ ವೈಜ್ಞಾನಿಕ ಧೋರಣೆಗಳ ನಡುವೆ ಇಂಗಿ ಹೋಗದಂತೆ – ಅದಕ್ಕೆ ಹೊಸದಾಗಿ ಜೀವಜಲವನ್ನು ತುಂಬಿದವರು ಶ್ರೀರಾಮಕೃಷ್ಣರು. ಹೀಗೆ ಭೂತ-ಭವಿಷ್ಯವನ್ನು ಬೆಸೆಯುವ, ನಮ್ಮ ಧರ್ಮ, ಸಂಸ್ಕೃತಿ, ಆಧ್ಯಾತ್ಮಿಕತೆಗಳ ದಿವ್ಯದರ್ಶನ ಮಾಡಿಸುವ, ಜನಸಾಮಾನ್ಯನಿಗೂ ಸಾಕ್ಷಾತ್ಕಾರದ ಹಂಬಲ, ಆದರ್ಶಗಳನ್ನು ಮೊಳೆಸುವ ಅಭೂತಪೂರ್ವ ಬೆಳಗು ಈ ಭಾವಧಾರೆಯೆದು. ಇದರ ಪ್ರವಾಹ ಅತ್ಯಂತ ನಿಧಾನ – ಆದರೆ ಈ ಜಲಸೇಚನದ ಪ್ರಭಾವ, ಫಲವಂತಿಕೆ ಅತಿ ನೂತನವಾದುದು.

ಯುಗಪುರುಷ ಶ್ರೀರಾಮಕೃಷ್ಣರು ತಮ್ಮ ದಿವ್ಯಾನುಭವಗಳಿಂದ ಕಂಡ ಸತ್ಯಗಳನ್ನು ಆಯ್ದ ಕೆಲವು ಸಾಧಕರ ಮುಂದೆ ಅನೇಕ ಬಗೆಗಳಲ್ಲಿ ಚಿತ್ರಿಸಿದರು; ಸಾಕ್ಷಾತ್ಕಾರವೇ ಮಾನವನ ಗುರಿ ಎಂದು ಅವಿಚಲ ಮನಸ್ಸಿನಿಂದ ಸಾರಿದರು. ಅದಕ್ಕಾಗಿ ಹಲವು ಬಗೆಯ ಸಾಧನಾ ಮಾರ್ಗಗಳನ್ನು ತೋರಿಸಿಕೊಟ್ಟರು. 'ರಾಮಕೃಷ್ಣ ಭಾವಧಾರೆ'ಯ ನಿಜವಾದ ಉಗಮ ಇಲ್ಲೇ. ದಕ್ಷಿಣೇಶ್ವರದ ಕಾಳೀ ಮಂದಿರದ ಒಂದು ಕೋಣೆಯಲ್ಲಿ ಕೆಲವು ಮಂದಿ ಭಕ್ತರ ನಡುವೆ ಕುಳಿತು, ನಿರಂತರ ದೈವೋನ್ಮಾದದಿಂದ ಆಧ್ಯಾತ್ಮಿಕ ಉಪದೇಶಗಳನ್ನು ನೀಡುತ್ತ ಬಂದ ಋಷಿಸದೃಶ ದೇವಮಾನವ ಶ್ರೀರಾಮಕೃಷ್ಣರ ಗಾಢ ಸಮಾಧಿಯ ಗರ್ಭದಿಂದ ಜನಿಸಿದ ಶ್ರೀವಾಣಿಯೇ ಭಕ್ತರ ಹೃದಯದಲ್ಲಿ ಹೊಸ ದೈವೀಭಾವಗಳ ಬೀಜವಾಗಿ ಪರಿಣಮಿಸಿತು. ಶ್ರೀರಾಮಕೃಷ್ಣರ ನಿರ್ಯಾಣಾನಂತರ ಆ ಭಕ್ತರುಗಳೇ ತಮ್ಮ ನಿರಂತರ ಸಾಧನೆ, ಸಾಕ್ಷಾತ್ಕಾರಗಳ ಮೂಲಕ ಆಧ್ಯಾತ್ಮಿಕ ಶಿಖರಗಳಾದರು. ಸ್ವಾಮಿ ವಿವೇಕಾನಂದರೂ ತಮ್ಮ ಗುರು ಪರಮಹಂಸರ ಗರಡಿಯಲ್ಲಿ ಪಳಗಿದ 'ಆಧ್ಯಾತ್ಮಿಕ ಕೇಸರಿ'ಯಾದರು. ಸಂನ್ಯಾಸಿಗಳ ಒಂದು ಸಂಘ ಹುಟ್ಟಿಕೊಂಡಿತು. ಭಾರತದಲ್ಲಿ ಹಾಗೂ ಪ್ರಪಂಚದೆಲ್ಲೆಡೆ ಶ್ರೀರಾಮಕೃಷ್ಣರ ಭಾವ, ಆದರ್ಶಗಳನ್ನು ಹರಡುವ ಹೊಸ ಧ್ಯೇಯವೊಂದು ರೂಪುಗೊಂಡಿತು: **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ।'** – 'ತನ್ನ ಮುಕ್ತಿಗಾಗಿ ಮತ್ತು ಜಗತ್ತಿನ ಹಿತಕ್ಕಾಗಿ'.

ಆಧ್ಯಾತ್ಮಿಕ ಸಾಧನೆಯೊಂದಿಗೆ ಜಗತ್ತಿನ ಹಿತ, ಜನರ ಸೇವೆ– ಇದು ಹೊಸ ಒಂದು ಜೀವನಕ್ರಮವೆಂದು ಪರಿಗಣಿಸಲಾಯಿತು. ಇದಕ್ಕೆ ಆಧಾರ ತತ್ತ್ವವೇ ವೇದಾಂತ – ಅದರಲ್ಲೂ ಮುಖ್ಯವಾಗಿ ಅದ್ವೈತ ವೇದಾಂತ. ಎಲ್ಲರ ಅಂತರಂಗದಲ್ಲಿ ಭಗವಂತನಿದ್ದಾನೆ, ಮಾನವನ ಸೇವೆಯೇ ನಿಜವಾಗಿ ಭಗವಂತನ ಸೇವೆ ಎಂಬ ಭಾವನೆ ಶ್ರೀರಾಮಕೃಷ್ಣರಿಂದ ವಿವೇಕಾನಂದರಿಗೆ, ಅವರಿಂದ ಪ್ರಪಂಚಕ್ಕೆ ಹರಿದು ಬಂತು. ಶ್ರೀರಾಮಕೃಷ್ಣರು ಒಮ್ಮೆ ಭಾವಸಮಾಧಿಯಲ್ಲಿ ಆಡಿದ **'ಶಿವಜ್ಞಾನೇ ಜೀವಸೇವಾ'** (ಮಾನವರೆಲ್ಲರೂ ಭಗವಂತನ ಪ್ರಕಟರೂಪ ಎಂಬ ಭಾವನೆಯಿಂದ ಜೀವಿಗಳ ಸೇವೆ ಮಾಡು–ಎಂದರ್ಥ) ಎಂಬ ಮಾತಿನಲ್ಲಿ ಎಲ್ಲ ವೇದಾಂತ ತತ್ತ್ವಗಳ ಆದರ್ಶ

ವನ್ನೂ, ಆಧುನಿಕ ಜಗತ್ತಿಗೆ ಅಗತ್ಯವಾದ ಕಾರ್ಯವಿಧಾನವನ್ನೂ ಆಧ್ಯಾತ್ಮಿಕ ಸಾಧನೆಗೆ ಬೇಕಾದ ಎಲ್ಲ ಯೋಗಗಳ ಸಮನ್ವಯವನ್ನೂ ಸ್ವಾಮೀಜಿ ಕಂಡುಕೊಂಡರು. ಈ ಮೂಲತತ್ತ್ವಕ್ಕೆ ಅನುಸಾರವಾಗಿ ರಾಮಕೃಷ್ಣ ಮಹಾಸಂಘದ ಕಾರ್ಯಚಟುವಟಿಕೆಗಳು ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ವಲಯಗಳಲ್ಲಿ ಆರಂಭಗೊಂಡವು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ವಿವಿಧ ಕೇಂದ್ರಗಳು, ಕ್ರಮವಾಗಿ ಆಧ್ಯಾತ್ಮಿಕ ಮತ್ತು ಸೇವಾ ಚಟುವಟಿಕೆಗಳಲ್ಲಿ ನಿರಂತರ ತೊಡಗಿಸಿಕೊಂಡಿವೆ, ದಿವ್ಯತ್ರಯರ ಜೀವನ-ಸಂದೇಶಗಳಿಗೆ ಅನುಗುಣವಾಗಿ ಹೊಸ ಹೊಸ ದಿಕ್ಕುಗಳಲ್ಲಿ ಕಾರ್ಯನಿರತವಾಗಿವೆ. ಬಡಜನರು, ಸಂತ್ರಸ್ತರು, ಮಹಿಳೆಯರು, ಮಕ್ಕಳು, ಯುವಕರು ಹೀಗೆ ಎಲ್ಲ ವರ್ಗಗಳಲ್ಲಿ ವಿಕಸನ ಮತ್ತು ತರಬೇತಿಯ ಹತ್ತು ಹಲವು ಕಾರ್ಯಕ್ರಮಗಳು ವಿವಿಧ ಕೇಂದ್ರಗಳಲ್ಲಿ ನಡೆಯುತ್ತಿವೆ. ಈ ಶಾಖಾ ಕೇಂದ್ರಗಳಲ್ಲಿ ರಾಮಕೃಷ್ಣ ಮಠ-ಮಿಷನ್ನಿಗೆ ಸೇರಿದ ಸಂನ್ಯಾಸಿಗಳು, ಸ್ವಯಂಸೇವಕರು ಹಾಗೂ ಭಕ್ತರು ಸೇವಾಮನೋಭಾವದಿಂದ ಅನೇಕ ಚಟುವಟಿಕೆಗಳನ್ನು ನಡೆಸುತ್ತಾರೆ. ಅಲ್ಲಿ ತರಬೇತಿ ಪಡೆದ, ಅಥವಾ ಸಂಪರ್ಕಕ್ಕೆ ಬಂದ ಹಲವು ಮಂದಿ ಯುವಕ-ಯುವತಿಯರು ಮುಂದೆ ಸಮಾಜದಲ್ಲಿ ಉತ್ಕೃಷ್ಟ ರೀತಿಯಲ್ಲಿ ಬಾಳಿ ಬೆಳಗಿರುವುದಕ್ಕೆ ಅನೇಕ ಉದಾಹರಣೆಗಳಿವೆ.

ರಾಮಕೃಷ್ಣ ಮಠಗಳಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳನ್ನೂ, ರಾಮಕೃಷ್ಣ ಮಿಷನ್ ಕೇಂದ್ರಗಳಲ್ಲಿ ಸೇವಾ ಚಟುವಟಿಕೆಗಳನ್ನೂ ಸಾಮಾನ್ಯವಾಗಿ ಕೈಗೊಳ್ಳಲಾಗುತ್ತಿದೆ. ಇದಕ್ಕೆ ಅನುಸಾರವಾಗಿ ಮಠಗಳು ದೇವಾಲಯ, ಧ್ಯಾನಮಂದಿರ, ಸಾಧುನಿವಾಸ, ಸಭಾಂಗಣ, ಪುಸ್ತಕ ಮಳಿಗೆ ಅಥವಾ ಪ್ರಕಟಣಾ ಮಂದಿರಗಳನ್ನು ಹೊಂದಿರುತ್ತವೆ. ನಿತ್ಯಪೂಜೆ, ಆಧ್ಯಾತ್ಮಿಕ ಮಹತ್ತ್ವವಿರುವ ಜನ್ಮಾಷ್ಟಮಿ, ಶಿವರಾತ್ರಿ , ದುರ್ಗಾಪೂಜೆಯಂತಹ ಹಬ್ಬಗಳು, ದಿವ್ಯತ್ರಯರ ಹಾಗೂ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರ ಜಯಂತಿ, ಶಂಕರ-ರಾಮಾನುಜ-ಮಧ್ವರೇ ಮೊದಲಾದ ಆಚಾರ್ಯರ ಹಾಗೂ ಬುದ್ಧ-ಚೈತನ್ಯ- ಕ್ರಿಸ್ತ ಮುಂತಾದವರ ಜಯಂತಿ ಇವನ್ನೂ ಆಚರಿಸಲಾಗುತ್ತಿದೆ. ಆಧ್ಯಾತ್ಮಿಕ ಸಾಧಕರಿಗೆ ಮಂತ್ರದೀಕ್ಷೆ, ಆಧ್ಯಾತ್ಮಿಕ ಸಲಹೆ, ವಿವಿಧ ಆಧ್ಯಾತ್ಮಿಕ ವಿಷಯಗಳನ್ನು ಕುರಿತ ಪ್ರವಚನಗಳು, ಸಂನ್ಯಾಸಿಗಳಿಂದ ವೈಯಕ್ತಿಕ ಸಲಹೆ ಇತ್ಯಾದಿಗಳು ಕೂಡ ನಡೆಯುತ್ತವೆ.

ಇನ್ನು ಮಿಷನ್ ಕೇಂದ್ರಗಳಲ್ಲಿ ಶೈಕ್ಷಣಿಕವಾಗಿ ಶಾಲೆ, ಕಾಲೇಜುಗಳು, ವಿವಿಧ ತರಬೇತಿ ಕೇಂದ್ರಗಳು, ವ್ಯಕ್ತಿತ್ವ ವಿಕಸನ ಸಂಸ್ಥೆಗಳು, ಮೌಲ್ಯಶಿಕ್ಷಣ ಹಾಗೂ ವೃತ್ತಿಪರ ತರಬೇತಿ ನೀಡುವ ಸಂಸ್ಥೆಗಳು, ಆಸ್ಪತ್ರೆ ಹಾಗೂ ಆರೋಗ್ಯಕೇಂದ್ರಗಳು, ವಿದ್ಯಾರ್ಥಿ ಮಂದಿರಗಳು, ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳು, ಕಂಪ್ಯೂಟರ್ ಕಲಿಕೆ ಇತ್ಯಾದಿ ಆಧುನಿಕ ತರಬೇತಿ ಕೇಂದ್ರಗಳು ಹಲವು ಪ್ರದೇಶಗಳಲ್ಲಿ ಗುಣಮಟ್ಟದ ಸೇವಾಕಾರ್ಯಗಳನ್ನು ನಡೆಸುತ್ತಿವೆ. ಇದಲ್ಲದೆ ಸಾಂದರ್ಭಿಕವಾಗಿ ಪ್ರಾಕೃತಿಕ ವಿಕೋಪ, ಅಗ್ನಿದುರಂತ ಮೊದಲಾದ ಅಘಾತಗಳು ಉಂಟಾದಾಗ ಹಲವೆಡೆ ಪರಿಹಾರ ಕಾರ್ಯಗಳನ್ನು ಮಿಷನ್ ನಡೆಸುತ್ತದೆ. ಒಟ್ಟಿನಲ್ಲಿ ವಿವಿಧ ಸೇವಾಕಾರ್ಯಗಳ ಮೂಲಕ ಭಗವಂತನ ಪೂಜೆಯನ್ನು ಮಾಡುವ ಪ್ರಯತ್ನ ನಡೆಯುತ್ತಿದೆ.

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ೨೦೨೫ನೇ ಇಸವಿಯಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸುತ್ತಿದೆ. ಈ ಸಂದರ್ಭದಲ್ಲಿ **'ಕರ್ನಾಟಕದಲ್ಲಿ ರಾಮಕೃಷ್ಣ - ವಿವೇಕಾನಂದ ಭಾವಧಾರೆ'** ಎಂಬ ವಿಷಯವನ್ನು ಕುರಿತು ಈ ವಿಶೇಷ ಸಂಚಿಕೆಯನ್ನು ಹೊರತರುತ್ತಿದೆ. ಇದರಲ್ಲಿ ಭಾವಧಾರೆಯ ವಿವಿಧ ಆಯಾಮಗಳನ್ನು, ಐತಿಹಾಸಿಕ ಬೆಳವಣಿಗೆಯನ್ನು ಹಾಗೂ ವಿವಿಧ ಕಾರ್ಯಚಟುವಟಿಕೆಗಳನ್ನು ಕುರಿತಂತೆ ಅನೇಕ ಮಂದಿ ಸಂನ್ಯಾಸಿಗಳು, ನಾಡಿನ ಗಣ್ಯ ಲೇಖಕರು ಬರೆದ ಒಟ್ಟು ೨೬ ಲೇಖನಗಳಿವೆ. ಇದನ್ನು ಮೂರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ: **೧) ಭಾವಧಾರೆಯ ಉಗಮ ೨) ಭಾವಧಾರೆಯ ವ್ಯಾಪಕತೆ ಹಾಗೂ ೩) ಭಾವಧಾರೆಯ ಸಂಪನ್ನತೆ**. ಕೇವಲ ರಾಮಕೃಷ್ಣ ಮಹಾಸಂಘದ ವಿವಿಧ ಕೇಂದ್ರಗಳು ಮಾತ್ರವಲ್ಲದೆ, 'ಶ್ರೀರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್' ಇದರಡಿಯಲ್ಲಿ ಬರುವ ಅನೇಕ ಸ್ವತಂತ್ರ ಆಶ್ರಮಗಳು, ಸಂಘಸಂಸ್ಥೆಗಳು, ಹಾಗೂ ವ್ಯಕ್ತಿಗಳು ನಡೆಸುವ ಕಾರ್ಯಚಟುವಟಿಕೆಗಳನ್ನು 'ಭಾವಧಾರೆ'ಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಯು ಕರ್ನಾಟಕದಲ್ಲಿ ಆರಂಭಗೊಂಡ ಬಗೆ, ಅದು ಎಲ್ಲೆಡೆ ಕ್ರಮೇಣ ಎಲ್ಲೆಡೆ ವ್ಯಾಪಿಸಿದ ಬೆಳವಣಿಗೆಗಳು, ಈ ಕಾರ್ಯದಲ್ಲಿ ವಿಶೇಷ ಕೊಡುಗೆಯನ್ನಿತ್ತ ಮಹನೀಯರು (ಸಂನ್ಯಾಸಿಗಳು ಹಾಗೂ ಗಣನೀಯ ವ್ಯಕ್ತಿಗಳು), ಭಾವಧಾರೆಯ ಅಂಗವಾಗಿ ನಡೆಯುವ ಸೇವಾಕಾರ್ಯಗಳು, ಆಧ್ಯಾತ್ಮಿಕ-ಸಾಮಾಜಿಕ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಇತರ ತರಬೇತಿ ಸಂಸ್ಥೆಗಳು, ವಿವಿಧ ಸಂದರ್ಭಗಳಲ್ಲಿ ನಡೆದ ಮಹತ್ವದ ಕಾರ್ಯಕ್ರಮಗಳು - ಇವನ್ನು ಈ ಸಂಚಿಕೆಯಲ್ಲಿ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ.

ರಾಮಕೃಷ್ಣ-ವಿವೇಕಾನಂದ ಭಾವಧಾರೆಯೆಂಬುದು ಒಂದು ನಿರಂತರ ಗಂಗಾಪ್ರವಾಹ. ಶ್ರೀರಾಮಕೃಷ್ಣ-ಶ್ರೀಮಾತೆ-ಸ್ವಾಮೀಜಿಯವರ ದಿವ್ಯಭಾವಗಳು ಈ ಪ್ರವಾಹದಲ್ಲಿ ಸದಾ ಅನುರಣಿಸುತ್ತವೆ. ಹಲವು ಬಾರಿ ಇದು ವ್ಯಕ್ತವಾಗಿ, ಕೆಲವು ಬಾರಿ ಗುಪ್ತಗಾಮಿನಿಯಾಗಿ ಜನಜೀವನದಲ್ಲಿ ಪವಿತ್ರ ತರಂಗಗಳ ಸ್ಪರ್ಶವನ್ನು ಮಾಡಿಸುತ್ತದೆ. ಈ ವಾಹಿನಿಯ ಒಂದು ಕಿರುನೋಟವನ್ನು ಕನ್ನಡ ಓದುಗರ ಮುಂದೆ ಹಿಡಿದಿಡುವ ಪ್ರಯತ್ನ ಇಲ್ಲಿದೆ. ✽


### ಜನವರಿ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಬುಧವಾರ | ಕಲ್ಪತರು ದಿನಾಚರಣೆ |
| ೫ | ಭಾನುವಾರ | ಸ್ವಾಮಿ ಶಾರದಾನಂದ ಜಯಂತಿ |
| ೧೦ | ಶುಕ್ರವಾರ | ಏಕಾದಶಿ |
| ೧೨ | ಭಾನುವಾರ | ಸ್ವಾಮಿ ತುರೀಯಾನಂದ ಜಯಂತಿ<br>ರಾಷ್ಟ್ರೀಯ ಯುವ ದಿನಾಚರಣೆ |
| ೨೧ | ಮಂಗಳವಾರ | ಸ್ವಾಮಿ ವಿವೇಕಾನಂದ ಜಯಂತಿ |
| ೨೫ | ಶನಿವಾರ | ಏಕಾದಶಿ |
| ೩೧ | ಶುಕ್ರವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |

# ಕರ್ನಾಟಕದ ಸಂದರ್ಭದಲ್ಲಿ ರಾಮಕೃಷ್ಣ ಭಾವಧಾರೆ : ಒಂದು ಪ್ರಸ್ತಾವನೆ

ಸ್ವಾಮಿ ವೀರೇಶಾನಂದ

ರಾಮಕೃಷ್ಣ ಭಾವಧಾರೆ ಎಂಬುದು ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ಇತ್ತೀಚೆಗೆ ಮೂಡಿಬಂದ ಒಂದು ಹೊಂಬೆಳಕು. ಇದರ ತಾತ್ತ್ವಿಕ ಹಿನ್ನೆಲೆ, ಅದು ವ್ಯಾಪಕಗೊಂಡ ಬಗೆ ಹಾಗೂ ಅದರ ಮಹತ್ವವನ್ನು ಇಲ್ಲಿ ವಿವರಿಸಲಾಗಿದೆ. ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಬಳಿಕ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿಯೂ ಅವರು ಸೇವೆ ಸಲ್ಲಿಸಿದ್ದರು. ಪ್ರಸ್ತುತ ಬೆಂಗಳೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳೂ ಲೇಖಕರೂ ಆಗಿರುವ ಅವರು ಹಲವು ಗ್ರಂಥಗಳನ್ನೂ ರಚಿಸಿದ್ದಾರೆ.



## ಶ್ರೀರಾಮಕೃಷ್ಣ ಭಾವ

ಶ್ರೀರಾಮಕೃಷ್ಣರು ಭಾವಸಾಗರ ಸ್ವರೂಪ. ಭಾವ ಎನ್ನುವುದು ಶ್ರೀರಾಮಕೃಷ್ಣರ ಜೀವನದಲ್ಲಿ ಹಾಸುಹೊಕ್ಕಾಗಿ ಇರುವ ಅವಸ್ಥೆ. ತಮ್ಮ ಉದ್ಗ್ರಂಥವಾದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ದಲ್ಲಿ ಸ್ವಾಮಿ ಶಾರದಾನಂದಜಿ ಅವರು ಹೀಗೆ ಬರೆಯುತ್ತಾರೆ: ''ಶ್ರೀರಾಮಕೃಷ್ಣರನ್ನು ನೋಡಿದಾಗಲೆಲ್ಲ ಅವರು ಒಂದು ಭಾವ ಘನಮೂರ್ತಿ ಎಂದೆನಿಸುತ್ತಿತ್ತು. ಆಧ್ಯಾತ್ಮಿಕ ಭಾವಗಳೆಲ್ಲ ಏಕತ್ರ ಕಲೆತು ಒಂದು ಹೊಸ ರೂಪವನ್ನು ತಾಳಿರುವಂತೆ ಅವರು ಕಾಣುತ್ತಿದ್ದರು.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ.೧, ಪು. ೩೭೧)* ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಭಾವಪರಿವರ್ತನೆ ಉಂಟಾದಂತೆ, ಅವರ ಶರೀರದಲ್ಲಿಯೂ ಅದ್ಭುತ ಮಾರ್ಪಾಡು ಉಂಟಾಗುತ್ತಿತ್ತು. ಸ್ವಾಮಿ ಶಾರದಾನಂದಜಿ ಅವರು ಹೇಳುವಂತೆ, ಭಾವರಾಜ್ಯದಲ್ಲಿ ಎಲ್ಲೆಲ್ಲಿಯೂ ಮುಕ್ತವಾಗಿ ಚಲಿಸುವ ಸಾಮರ್ಥ್ಯವಿತ್ತು ಅವರಿಗೆ. ಭಾವಮುಖ ಸ್ಥಿತಿಯಲ್ಲಿ ಅವರಿಗೆ ಸಮಸ್ತ ಜಗತ್ತು ಕೂಡ ಭಾವಮುಖವಾಗಿ ಕಾಣುತ್ತಿತ್ತು. ಜಗನ್ಮಾತೆಯು ಅವರ ಮನಸ್ಸನ್ನು ಎಂಥ ಉನ್ನತ ಸ್ಥಿತಿಯಲ್ಲಿ ಇರಿಸಿದ್ದಳೆಂದರೆ, ಅನಂತ ವಿಶ್ವಮನಸ್ಸಿನಲ್ಲಿ ಏಳುವ ಭಾವನೆಗಳೆಲ್ಲ ಅವರದೇ ಆಗುತ್ತಿದ್ದವು. ಹೀಗೆ ಶ್ರೀರಾಮಕೃಷ್ಣರ ಮನಸ್ಸು ವಿಶ್ವಮನಸ್ಸಾಗಿತ್ತು. ಅದರಲ್ಲಿ ಸಹಸ್ರಾರು ಭಾವಗಳ ಅಲೆಗಳು ಏಳುತ್ತಿದ್ದವು. ಅವೆಲ್ಲ ಭಾವಗಳೊಡನೆ ತಾದಾತ್ಮ್ಯ ಭಾವನೆಯನ್ನು ಪಡೆದುಕೊಳ್ಳುವ ವಿಶ್ವಮಾನವರಾಗಿದ್ದರು ಶ್ರೀರಾಮಕೃಷ್ಣರು.

## ಶ್ರೀರಾಮಕೃಷ್ಣ ಭಾವಧಾರೆ

ಶ್ರೀರಾಮಕೃಷ್ಣರು ಜಗನ್ಮಾತೆಯ ಸಗುಣ ಮತ್ತು ನಿರ್ಗುಣ – ಎರಡೂ ಸ್ವರೂಪಗಳನ್ನು ತಮ್ಮ ಸಾಧನೆಯ ಅವಧಿಯಲ್ಲಿ ಪೂರ್ಣವಾಗಿ ಅನುಭವಿಸಿದರು. ತದನಂತರ ನಿರ್ವಿಕಲ್ಪ ಸಮಾಧಿಯಲ್ಲಿ ಅವರು ಆರು ತಿಂಗಳು ಮಗ್ನರಾಗಿದ್ದರು. ಇದಾದ ಮೇಲೆ, ಜಗನ್ಮಾತೆಯು 'ಭಾವಮುಖದಲ್ಲಿರು' ಎಂದು ಅವರಿಗೆ ಆದೇಶವನ್ನು ನೀಡಿದ್ದಳು. 'ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗುತ್ತಿವೆಯೋ, ಆ ವಿಶ್ವ-ಅಹಂ ನೀನಾಗಿರುವೆ. ಅದರ ಇಚ್ಛೆಯೇ ನಿನ್ನ ಇಚ್ಛೆ' ಎಂದು ನಿರ್ದೇಶನವನ್ನು ಕೊಟ್ಟಳು. ಈ ಭಾವಮುಖ ಸ್ಥಿತಿಯಲ್ಲಿಯೇ ಶ್ರೀರಾಮಕೃಷ್ಣರು ತಮ್ಮ ಉಳಿದ ಜೀವಿತವನ್ನು ಸವೆಸಿದರು; ಆ ಮೂಲಕ ಎಲ್ಲ ಧರ್ಮಗಳನ್ನೂ ಪಂಗಡಗಳನ್ನೂ ಮತಗಳನ್ನೂ ಸಿದ್ಧಾಂತಗಳನ್ನೂ ಪೂಜಾಪದ್ಧತಿ-ನಂಬಿಕೆಗಳನ್ನೂ ತಮ್ಮ